KA / B… O/ 2515 /WPP 47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ – I | ಬೆಂಗಳೂರು, ಶನಿವಾರ, ಮೇ ೩೦, ೨೦೦೯ (ಜ್ಯೇಷ್ಠ ೯, ಶಕ ವರ್ಷ ೧೯೩೧) | ನಂ. ೩೫೭

## ಕರ್ನಾಟಕ ಸರ್ಕಾರದ ನಡವಳಿಗಳು

## ನಗರಾಭಿವೃದ್ಧಿ ಸಚಿವಾಲಯ

ವಿಷಯ : ಆನೇಕಲ್, ಹೊಸಕೋಟೆ, ನೆಲಮಂಗಲ, ಮಾಗಡಿ ಮತ್ತು ಕನಕಪುರ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶಗಳಿಗೆ ತಯಾರಿಸಿರುವ ಮಧ್ಯಂತರ ಮಹಾಯೋಜನೆಗಳಿಗೆ ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961 ಕಲಂ 13(ಎ)ರನ್ವಯ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಯುಡಿಡಿ 173 ಬಿಎಂಆರ್ 2006 ದಿನಾಂಕ: 28.04.2007.
2. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರಿಂದ ಸ್ವೀಕರಿಸಿರುವ ಪತ್ರದ ಸಂಖ್ಯೆ: ಬಿಎಂಆರ್‌ಡಿಎ/ಟಿಪಿ/IMP/2005–06 ದಿನಾಂಕ: 27.09.2007 ಮತ್ತು 27.09.2007.
3. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರಿಂದ ಸ್ವೀಕರಿಸಿರುವ ಪತ್ರದ ಸಂಖ್ಯೆ: ಬಿಎಂಆರ್‌ಡಿಎ/ಟಿಪಿ/IMP/2005–06 ದಿನಾಂಕ: 29.09.2007.
4. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರಿಂದ ಸ್ವೀಕರಿಸಿರುವ ಪತ್ರದ ಸಂಖ್ಯೆ: ಬಿಎಂಆರ್‌ಡಿಎ/ಟಿಪಿ/IMP/2005–06 ದಿನಾಂಕ: 01.10.2007 ಮತ್ತು 01.10.2007.
5. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರಿಂದ ಸ್ವೀಕರಿಸಿರುವ ಪತ್ರದ ಸಂಖ್ಯೆ: ಬಿಎಂಆರ್‌ಡಿಎ/IMP/2005–06 ದಿನಾಂಕ: 28.05.2009

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 28.04.2007ರ ಆದೇಶದಲ್ಲಿ ಸರ್ಕಾರವು ಆನೇಕಲ್, ಹೊಸಕೋಟೆ, ಮಾಗಡಿ, ಕನಕಪುರ ಮತ್ತು ನೆಲಮಂಗಲ ಯೋಜನಾ ಪ್ರಾಧಿಕಾರಗಳ ಪ್ರದೇಶಗಳ ವ್ಯವಸ್ಥಿತ ಬೆಳವಣಿಗೆಗೆ ಮತ್ತು ಯೋಜನಾ ದೃಷ್ಟಿಯಿಂದ ಕರ್ನಾಟಕ ಪಟ್ಟಣ ಮತ್ತು ನಗರ ಯೋಜನಾ ಅಧಿನಿಯಮ 1961ರ ಸೆಕ್ಷನ್ 13(A) ಮತ್ತು ಸೆಕ್ಷನ್ 9(2)ರಲ್ಲಿ ಒದಿಕೊಂಡಿರುವಂತೆ ಕೆಲವು ನಿಬಂಧನೆಗಳಿಗೆ ಒಳಪಟ್ಟು ಕರಡು ಮಧ್ಯಂತರ ಮಹಾಯೋಜನೆಗೆ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿತ್ತು.

ಮೇಲೆ (1) ರಿಂದ (4)ರವರೆಗೆ ಓದಲಾದ ದಿನಾಂಕ: 27.09.2007, 29.09.2007, 01.10.2007 ಪತ್ರಗಳಲ್ಲಿ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರು ಆನೇಕಲ್, ನೆಲಮಂಗಲ, ಹೊಸಕೋಟೆ, ಮಾಗಡಿ ಮತ್ತು ಕನಕಪುರ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶಗಳಿಗೆ ಮಧ್ಯಂತರ ಮಹಾಯೋಜನೆಗೆ ಸರ್ಕಾರದ ಆದೇಶದನ್ವಯ ಸಾರ್ವಜನಿಕ ಸಲಹೆ/ಆಕ್ಷೇಪಣೆಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿಸಿ, ಸದರಿ ಸಲಹೆ ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಲು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ

ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮತ್ತು ಹೆಚ್ಚುವರಿ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾ ಇವರುಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತೆಂದು, ಸದರಿ ಸಮಿತಿಯು ಮೇಲಿನ ಸ್ಥಳೀಯ ಯೋಜ ಪ್ರಾಧಿಕಾರಗಳಿಂದ ಬಂದಿರುವ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳನ್ನು ಪರಿಶೀಲಿಸಲಾಗಿದೆಯೆಂದು ವರದಿ ಮಾಡಿರು ಮುಂದುವರಿದು, ಮೇಲೆ (5)ರಲ್ಲಿ ಓದಲಾದ ದಿನಾಂಕ: 28.05.2009ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬೆಂಗಳ ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರು ಮೇಲಿನ 5 ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶಗ ತಾತ್ಕಾಲಿಕ ಮಧ್ಯಂತರ ಮಹಾಯೋಜನೆಯಲ್ಲಿ ಸರ್ಕಾರದ KIADB, KHB ಇತ್ಯಾದಿ ಪ್ರಾಧಿಕಾರಗ ಭೂಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸುತ್ತಿರುವ ಜಮೀನಿನ ಉಪಯೋಗವನ್ನು ಹಾಗೂ ಗೃಹ ನಿರ್ಮಾಣ ಸಹ ಸಂಘಗಳಿಂದ ಬಂದಿರುವ ಬೇಡಿಕೆಗಳನ್ನು ಮತ್ತು ಕರಡು ಮಧ್ಯಂತರ ಮಹಾಯೋಜನೆ ಪ್ರಕಟಿಸುವವರೆಗೂ ಆಗಿರುವ ಎ ಭೂಪರಿವರ್ತನೆಗಳನ್ನು ಪರಿಗಣಿಸುವ ಬಗ್ಗೆ ಷರತ್ತುಗಳ ಮೂಲಕ ಅಳವಡಿಸಿಕೊಂಡು ಮಧ್ಯಂತರ ಮಹಾಯೋಜನೆಯ ಹಾಗೂ ವರದಿಗಳನ್ನು ಪರಿಷ್ಕರಿಸಿ, ಅಂತಿಮ ಮಧ್ಯಂತರ ಯೋಜನೆಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿರುವ ವರದಿ ಮಾಡಿರುತ್ತಾರೆ.

ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರು ಸಲ್ಲಿಸಿರುವ ಆನೇಕಲ್ ಹೊಸಕೋಟೆ, ನೆಲಮಂಗಲ, ಮಾಗಡಿ ಮತ್ತು ಕನಕಪುರ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶಗ ತಯಾರಿಸಿರುವ ಮಧ್ಯಂತರ ಮಹಾಯೋಜನೆಗಳನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ:-

**ಸರ್ಕಾರಿ ಆದೇಶ ಸಂಖ್ಯೆ : ನಅಇ 173 ಬಿಎಂಆರ್ 2006, ಬೆಂಗಳೂರು. ದಿನಾಂಕ: 28ನೇ ಮೇ, 2009**

ಪ್ರಸ್ತಾವನೆಯಲ್ಲಿ ಹೇಳಿರುವ ಅಂಶಗಳನ್ನು ಪರಿಶೀಲಿಸಿ, ಆನೇಕಲ್, ಹೊಸಕೋಟೆ, ನೆಲಮಂಗಲ, ಮಾಗಡಿ ಮತ್ತು ಕನಕಪುರ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶಗಳಿಗೆ ದಿನಾಂಕ: 28.04.2007ರಂದು ಅನುಮೋದಿಸಿರುವ ತಾತ್ಕಾಲಿಕ ಮಧ್ಯಂತರ ಮಹಾಯೋಜನೆಗಳಿಗೆ ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತ ಯೋಜನಾ ಕಾಯಿದೆ 1961 ಕಲಂ 13(ಎ)ರನ್ವಯ ಮಂಜೂರಾತಿಯನ್ನು ನೀಡಿದೆ.

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ ಮುಂತಾದ ಸರ್ಕಾರೀ ಸ್ವಾಮ್ಯದ ಪ್ರಾಧಿಕಾರಗಳು ಇದುವರೆವಿಗೂ ಭೂ ಸ್ವಾಧೀನ ಪಡಿಸಿಕೊಂಡು ಅಭಿವೃದ್ಧಿಪಡಿಸುತ್ತಿರುವ ಜಮೀನುಗಳ ಭೂ ಉಪಯೋಗವನ್ನು ಅದೇ ಉಪಯೋಗಗಳಿಗೆ ಮೀಸಲಿಡಲಾಗಿದೆ ಎಂದು ಪರಿಗಣಿಸತಕ್ಕದ್ದು.
2. ದಿನಾಂಕ: 28.04.2007ರ ಮೊದಲು ಭೂ ಪರಿವರ್ತನೆ ಮಾಡಲ್ಪಟ್ಟ ಜಮೀನುಗಳನ್ನು ಯಾವ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಲ್ಪಟ್ಟಿದೆಯೋ ಅದೇ ಉಪಯೋಗಕ್ಕೆ ಮೀಸಲಿಡಲಾಗಿದೆ ಎಂದು ಪರಿಗಣಿಸತಕ್ಕದ್ದು.
3. ನೋಂದಾಯಿತ ಗೃಹ ನಿರ್ಮಾಣ ಸಹಕಾರಿ ಸಂಘಗಳಿಂದ ವಸತಿ ಯೋಜನೆಗಾಗಿ ಕರಡು ಮಧ್ಯಂತರ ಮಹಾಯೋಜನೆಗೆ ನಿಯಮಾನುಸಾರ ಬೇಡಿಕೆ ಸ್ವೀಕರಿಸಿರುವ ಎಲ್ಲಾ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಮೀಸಲಿಡಲಾಗಿದೆ ಎಂದು ಪರಿಗಣಿಸತಕ್ಕದ್ದು.
4. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲು ಉದ್ದೇಶಿಸಿರುವ STRR, ITRR, IRR ರಸ್ತೆಗಳ ಅಂತಿಮ ಪಂಕ್ತೀಕರಣವನ್ನು ಅಭಿವೃದ್ಧಿಗೆ ಅನುಮೋದಿಸುವ ಮೊದಲು ಪರಿಗಣಿಸುವುದು.
5. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ 1961 ಸೆಕ್ಷನ್ 13ಎ(2)ರನ್ವಯ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ಮೇಲೆ ತಿಳಿಸಿದ 5 ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶಗಳಿಗೆ ಅಂತಿಮ ಮಹಾಯೋಜನೆಯನ್ನು ತಯಾರಿಸಿ ತಕ್ಷಣ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಆನೇಕಲ್, ಹೊಸಕೋಟೆ, ನೆಲಮಂಗಲ, ಮಾಗಡಿ ಮತ್ತು ಕನಕಪುರ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶಗಳಿಗೆ ತಯಾರಿಸಿರುವ ಅಂತಿಮ ಮಧ್ಯಂತರ ಮಹಾಯೋಜನೆಯ ನಕ್ಷೆಗೆ ಹಾಗೂ ವರದಿಗೆ ಸರ್ಕಾರದ ಮೊಹರು ಹಾಕಿ, ಸಹಿ ಮಾಡಿ ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಪ್ರೇಮಚಂದ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು.